ಡಿ ಡಬ್ಲ್ಯೂ 1

**ದಿನಾಂಕಃ 27-08-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಐ ಡಿ ಜೆ ವಕೀಲರಿಂದಃ**

ವಾದಿಯರು ನನಗೆ ವೈಯುಕ್ತಿಕವಾಗಿ ಪರಿಚಯ ಇಲ್ಲ ಆದರೆ ಅವರನ್ನು ಸುಮಾರು 10-15 ವರ್ಷಗಳಿಂದ ನೋಡುತ್ತಿದ್ದೇನೆ. ನಾನು ಖರೀದಿ ಮಾಡಿದ ಆಸ್ತಿ ಸಾಮೂಹಿಕ ಆಸ್ತಿಯಲ್ಲಿರುವ ಒಂದು ಭಾಗವಾಗಿರುತ್ತದೆ ಎಂದರೆ ನಿಜ. ನನಗೆ ಮಾರಾಟ ಮಾಡಿದ ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಯರು ಮುಸ್ಲಿಂ ಸಮಾಜಕ್ಕೆ ಸೇರಿದ ವ್ಯಕ್ತಿಗಳಾಗುತ್ತಾರೆ ಎಂದರೆ ನಿಜ. ಸದರ ಆಸ್ತಿಯಲ್ಲಿ ಅಂಗಡಿ ಮತ್ತು ಮನೆ ಎರಡೂ ಇರುತ್ತವೆ ಎಂದರೆ ನಿಜ. ನಾನು ಖರೀದಿ ಮಾಡಿದ ಆಸ್ತಿಯ ಉತ್ತರ ಮತ್ತು ದಕ್ಷಿಣ ಭಾಗಕ್ಕೆ ವಾದಿ ಮತ್ತು ಅವರ ಸಂಬಂಧಿಕರ ಆಸ್ತಿಗಳು ಇರುತ್ತವೆ ಎಂದರೆ ನಿಜ. ನಾನು ಖರೀದಿ ಮಾಡಿದ ಎರಡೂ ಬದಿಯ ಗೋಡೆಗಳು ಸಾಮೂಹಿಕ ಗೋಡೆಗಳಾಗಿರುತ್ತವೆ ಎಂದರೆ ನಿಜ.

ನಾನು ಬಾವಸಾರ ಕ್ಷತ್ರಿಯ ಸಮಾಜಕ್ಕೆ ಸೇರಿದ ವ್ಯಕ್ತಿಯಾಗಿರುತ್ತೇನೆ. ಸದರ ಆಸ್ತಿಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ ಮುಸ್ಲಿಂ ಸಮಾಜಕ್ಕೆ ಹೊರತುಪಡಿಸಿ ಬೇರೆ ಸಮಾಜದ ವ್ಯಕ್ತಿಗಳು ಇರುವುದಿಲ್ಲ ಎಂದರೆ ನಿಜ ಆದರೆ ಬಾಡಿಗೆದಾರರು ಇರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಆಸ್ತಿಯಲ್ಲಿರುವ ಕಟ್ಟಡಕ್ಕೆ ಒಂದೇ ಮೇಲ್ಛಾವಣಿ ಇರುತ್ತದೆ ಎಂದರೆ ನಿಜ. ಒಟ್ಟು ಆಸ್ತಿಯಲ್ಲಿ 8 ಭಾಗಗಳು ಇರುತ್ತವೆ ಎಂದರೆ ನಿಜ.

ಸದರ ದಾವಾ ಆಸ್ತಿಯಲ್ಲಿ ನಾನು ದಿನಾಂಕ 10-12-2016 ರಂದು ಮೊದಲ ಬಾರಿಗೆ ಖರೀದಿ ಮಾತುಕತೆ ಮಾಡಿಕೊಂಡಿರುತ್ತೇನೆ. ಅದರ ಬಗ್ಗೆ ದಾಖಲೆ ಇರುತ್ತದೆ. ಆ ದಾಖಲೆಯನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿರುವುದಿಲ್ಲ. ಮಾತುಕತೆ ಸಮಯಕ್ಕೆ ನಾನು 5 ಲಕ್ಷ ಮುಂಗಡ ಹಣವನ್ನು ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ. ವಾದಿಯರು ಹಾಕಿದ ದಾವೆ ಬಗ್ಗೆ ಮತ್ತು ಅವರು ಹಾಜರಪಡಿಸಿದ ದಾಖಲೆ ವಿಷಯ ನನಗೆ ಗೊತ್ತು. ನಾನು ಈ ಕೇಸಿನಲ್ಲಿ ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ ಎಂದರೆ ನಿಜ. ನಾನು ಪ್ರತಿವಾದಿಯರೊಂದಿಗೆ ಮಾತುಕತೆ ಮಾಡುವುದಕ್ಕಿಂತ ಮುಂಚೆ ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಅದೇ ರೀತಿ ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವುದಕ್ಕಿಂತ ಮುಂಚೆ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಸಾಮೂಹಿಕವಾದ ಮೆಟ್ಟಿಲುಗಳು ಮತ್ತು ಖುಲ್ಲಾ ಜಾಗೆ ಇರುತ್ತದೆ ಎಂದರೆ ನಿಜ. ಸದರ ಮೆಟ್ಟಿಲು ಮತ್ತು ಖುಲ್ಲಾ ಜಾಗೆಯನ್ನು ಎಲ್ಲರೂ ಸೇರಿ ಉಪಯೋಗ ಮಾಡುತ್ತಾರೆ ಎಂದರೆ ನಿಜ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವುದಕ್ಕಿಂತ ಮುಂಚೆ ಯಾವುದೇ ಜಾಹೀರು ನೋಟೀಸ್ ಕೊಟ್ಟಿರುವುದಿಲ್ಲ ಎಂದರೆ ನಿಜ. ಅದೇ ರೀತಿ ನಾನು ಸದರ ಆಸ್ತಿಯನ್ನು ಖರೀದಿ ಮಾಡುತ್ತಿದ್ದೇನೆಂದು ಉಳಿದ ಮಾಲಕರಿಗೂ ಕೂಡ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ.

ವಾದಿಯರು ಈ ದಾವೆ ಹಾಕುವುದಕ್ಕಿಂತ ಮುಂಚೆ ತಮ್ಮ ವಕೀಲರ ಮೂಲಕ ಒಂದು ನೋಟೀಸ್ ಕೊಟ್ಟಿರುತ್ತಾರೆ ಎಂದರೆ ನಿಜ. ಅದಕ್ಕೆ ಉತ್ತರವನ್ನು ನಾನು ಕೊಟ್ಟಿರುವುದಿಲ್ಲ ಎದರೆ ನಿಜ. ನೋಟೀಸ್ ಬಂದ ವಿಚಾರವನ್ನು ನಾನು ಪ್ರತಿವಾದಿಯರಿಗೆ ತಿಳಿಸಿರುತ್ತೇನೆ ಅವರು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಬ್ದುಲ್ ಮಜೀದ್ ಪ್ರತಿವಾದಿಯರ ಮೇಲೆ ಬೇರೆ ಇನ್ನೊಂದು ದಾವೆ ಮಾಡಿದ್ದರು ಎಂದರೆ ನಿಜ. ಸದರ ದಾವೆ ಬಗ್ಗೆ ವಾದಿಯರು ತಮ್ಮ ವಾದ ಪತ್ರದಲ್ಲಿ ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಯಾವ ರೀತಿ ಅವರ ಪಾಲಿಗೆ ಹಿಸ್ಸೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಖರೀದಿ ಮಾಡುವುದಕ್ಕಿಂತ ಮುಂಚೆ ಸದರ ಆಸ್ತಿಗಳ ಬಗ್ಗೆ ತಕರಾರು ಇದ್ದ ವಿಷಯ ಗೊತ್ತಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಅಸಲು ದಾವಾ ಸಂಖ್ಯೆ 14/1995 ರಲ್ಲಿ ರಾಜಿ ಮಾಡಿಕೊಂಡಿದ್ದು ಹಾಗೂ ಅದರಲ್ಲಿ ಯಾರು ಯಾವ ಆಸ್ತಿಯನ್ನು ಹೇಗೆ ಉಪಯೋಗ ಮಾಡಬೇಕೆಂದು ಷರತ್ತುಗಳನ್ನು ಹಾಕಿಕೊಂಡು ರಾಜಿ ಮಾಡಿರುತ್ತಾರೆ ಎಂದರೆ ನಿಜ. ಆ ದಾಖಲೆಯನ್ನು ವಾದಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ ಎಂದರೆ ನಿಜ. ಪ್ರತಿವಾದಿಯರು ಸದರ ಷರತ್ತುಗಳನ್ನು ಉಲ್ಲಂಘನೆ ಮಾಡಿ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಪಟ್ಟಾಗ ವಾದಿಯರು ಅಸಲು ದಾವಾ ಸಂಖ್ಯೆ 33/2016 ಅವರ ವಿರುದ್ಧ ಘೋಷಣೆ ಮತ್ತು ತಾಕೀದಿಗಾಗಿ ಹಾಕಿರುತ್ತಾರೆ ಎಂದರೆ ನಿಜ. ಆ ದಾವೆಯಲ್ಲಿ ಪ್ರತಿವಾದಿಯರು ಹಾಜರಾಗುವುದಕ್ಕಿಂತ ಮುಂಚೆ ನ್ಯಾಯಾಲಯ ವಾದಿಯರಿಗೆ ತಾತ್ಕಾಲಿಕ ಮನಯ ಆದೇಶ ನೀಡಿದ್ದರು ಎಂದರೆ ನಿಜ. ತದಾದ ನಂತರ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ ವಿಷಯ ವಾದಿಯರಿಗೆ ಗೊತ್ತಾಗಿ ದಾವೆಯನ್ನು ಹಿಂತೆಗೆದುಕೊಂಡಿರುತ್ತಾರೆ ಎಂದರೆ ನಿಜ.

ಆಸ್ತಿಗೆ ಸಂಬಂದಪಟ್ಟ ಬೇರೆ ಹಿಸ್ಸೆದಾರರು ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡುವಾಗ ವಾದಿಯರು ಮತ್ತೊಂದು ದಾವೆ ಹಾಕಿದ್ದರು ಎಂದರೆ ನಿಜ. ಆ ದಾವೆ ಹಾಕಿದ ನಂತರ ಮಾರಾಟಗಾರರು ವಾದಿಯರಿಗೆ ಸದರ ಆಸ್ತಿಗಳನ್ನು ಕೊಡಲು ಒಪ್ಪಿ ಕೊಂಡಿರುತ್ತಾರೆ ಎಂದರೆ ನಿಜ. ಆ ಸಮಯದಲ್ಲಿ ವಾದಿಯರು ತಮ್ಮ ಮಗನಾದ ಜಿಲಾನಿ ರವರ ಹೆಸರಿನಲ್ಲಿ ಸನ್ 2002 ಮತ್ತು 2004 ರಲ್ಲಿ ಆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನಿಜ.

ಮೇಲೆ ಹೇಳಿದ ಎಲ್ಲಾ ವಿಷಯವನ್ನು ನನ್ನ ಪ್ರತಿವಾದ ಸಲ್ಲಿಸುವಾಗ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಆ ವಿಷಯವನ್ನು ಅಂದರೆ ಪ್ರತಿವಾದ ಪತ್ರವನ್ನು ನಮ್ಮ ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಮಾಡಿಕೊಂಡ ರಾಜಿ ಸಂದಾನ ಪತ್ರದಲ್ಲಿ ಯಾರಾದರೂ ತಮ್ಮ ಹಿಸ್ಸೆಯನ್ನು ಮಾರಾಟ ಮಾಡುವಾಗ ಉಳಿದ ಹಿಸ್ಸೆದಾರರನ್ನು ಕೇಳಿ ಅವರು ಒಪ್ಪಿದರೆ ಮಾತ್ರ ಮಾರಾಟ ಮಾಡಬೇಕೆಂಬ ಕರಾರು ಇರುತ್ತದೆ ಎಂದರೆ ನಿಜ ಆ ಕರಾರಿಗೆ ಒಪ್ಪಿ ಕೊಂಡು 2002 ಮತ್ತು 2004 ರಲ್ಲಿ ಉಳಿದ ಹಿಸ್ಸೆದಾರರು ವಾದಿಯರ ಮಗನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ.

ಡಿ ಡಬ್ಲ್ಯೂ 1

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಗೊತ್ತಿದೆ. ನನ್ನ ಪ್ರಮಾಣ ಪತ್ರದಲ್ಲಿ ಸದರ ಯಾವುದೇ ವಿಷಯವನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ವಾದಿಯರು ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಅವರ ಸಂಬಂಧಿಕರನ್ನು ಕರೆದುಕೊಂಡು ಬಂದು ನನಗೆ ಬೇಟಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರು ನಾನು ನೀವು ಖರೀದಿ ಮಾಡಿದ ಆಸ್ತಿಯನ್ನು ನಾನು ಖರೀದಿಸಲು ಸಿದ್ದನಿರುತ್ತೇನೆ ಎಂದು ಕೇಳಿರುತ್ತಾರೆ ಎಂದರೆ ನಿಜ ಆದರೆ ಸಾಕ್ಷಿ ಪುನಃ ನನಗೆ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಕೇಳಿದ ನಂತರ ನಾನು ತಕರಾರು ಮಾಡಿದ್ದರಿಂದ ಅವರು ನನಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಕೂಡ ವಾದಿಯರನ್ನು ನೇರವಾಗಿ ಬೇಟಿಯಾಗಿರುವುದಿಲ್ಲ. ನಾನು ನಮ್ಮ ವಕೀಲರಿಗೆ ವಾದಿಯರನ್ನು ಕೇಳಿದಾಗ ಅವರು ನನಗೆ ಆಸ್ತಿ ಖರೀದಿ ಮಾಡಲು ಆಗುವುದಿಲ್ಲ ಎಂದು ವಿಷಯವನ್ನು ಹೇಳಿರುವುದಿಲ್ಲ. ಈಗಲೂ ಕೂಡ ವಾದಿ ಆಸ್ತಿಯನ್ನು ಖರೀದಿ ಮಾಡಲು ಸಿದ್ದರಿದ್ದಾರೆ ಎಂದರೆ ನಾನು ಕೂಡ ಕೊಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

ನಾನು ಖರೀದಿ ಪತ್ರದಲ್ಲಿ ನನ್ನ ಪಾನ್ ಕಾರ್ಡ ನಂಬರ್ ಹೇಳಿ ಬರೆಸಿರುತ್ತೇನೆ ಸದರ ಖರೀದಿ ಪತ್ರದಲ್ಲಿ ಪಾನ್ ಕಾರ್ಡ ನಂಬರ್ ಸರಿಯಾಗಿ ಇರುತ್ತದೆ ಅಥವಾ ಇಲ್ಲ ಎಂದು ನಾನು ನೋಡಿರುವುದಿಲ್ಲ ನನ್ನ ಖರೀದಿ ಪತ್ರದಲ್ಲಿ ನಾನು ಉದ್ದೇಶಪೂರ್ವಕವಾಗಿ ಪಾನ್ ಕಾರ್ಡ ನಂಬರ್ ನ್ನು ಸರಿಯಾಗಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಫೋನ್ ನಂಬರ್ 9686831955 ಆಗಿರುತ್ತದೆ. ಖರೀದಿ ಮಾಡುವಾಗ ಕೂಡ ಸದರ ನಂಬರ್ ನ್ನು ಹೇಳಿ ಬರೆಸಿರುತ್ತೇನೆ. ಖರೀದಿ ಪತ್ರದಲ್ಲಿ ಚಕ್ಕಬಂದಿಯಲ್ಲಿ ದಾವಾ ಆಸ್ತಿಯ ಉತ್ತರಕ್ಕೆ ಅಮೀನಾಬಿ ಅಬ್ದುಲ್ ರಶೀದ್ ಸಾಬ್ ಹತ್ತಿಮತ್ತೂರು ಎಂದು ಬರೆಸಿರುತ್ತೇನೆ ಎಂದರೆ ನಿಜ. ಅವರ ನಿಜವಾದ ಅಡ್ಡ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಇರುವ ಆಸ್ತಿಯನ್ನು ವಾದಿಯರ ಮಗ ಜಿಲಾನಿ ಖರೀದಿ ಮಾಡಿದ ಆಸ್ತಿ ಇರುತ್ತದೆ ಎಂದರೆ ನಿಜ. ಸದರ ವಿಷಯವನ್ನು ನಾನು ಚಕ್ಕಬಂದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ನಿಜ. ನಾನು ಸದರ ದಾವಾ ಆಸ್ತಿಯನ್ನು ಉಪಯೋಗ ಮಾಡುತ್ತಿದ್ದುದರಿಂದ ವಾದಿ ಮತ್ತು ಅವರ ಕುಟುಂಬದವರಿಗೆ ತೊಂದರೆಯಾಗುತ್ತದೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯಲ್ಲಿ ನನ್ನ ಮಿತ್ರ ವಾಮನ್ ರೇವಣಕರ ಎಂಬುವವರು ಜ್ಯುವೆಲರಿ ಶಾಪ್ ನಡೆಸುತ್ತಿದ್ದಾರೆ. ಅವರು ನಾನು ಖರೀದಿ ಮಾಡಿದ ಒಂದು ತಿಂಗಳು ಆದ ಮೇಲೆ ಸದರ ಆಸ್ತಿಯಲ್ಲಿ ತಮ್ಮ ಅಂಗಡಿ ನಡೆಸುತ್ತಿದ್ದಾರೆ. ಆ ಕಾರಣದಿಂದ ನಾನು ವಾದಿಯರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಬಾಧ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.